ಅಧ್ಯಕ್ಷರು: ಆಯಿತು, ತೆಗೆದುಕೊಳ್ಳೋಣ ಬಿಡಿ. ಈಗ ತಡೆಹಿಡಿಯಲಾದ ಪ್ರಶ್ನೆ ತೆಗೆದುಕೊಳ್ಳೋಣ.

ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮದಡಿ ಕೇಂದ್ರದಿಂದ ಬಂದ ಅನುದಾನ

347 (3151) ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 2002–2003ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹಂಚಿಕೆಯಾದ ಅನುದಾನ ಮೊತ್ತ ಎಷ್ಟು;

ಆ) ಈವರೆವಿಗೂ ಎಷ್ಟು ಅನುದಾನ ಬಿಡುಗಡೆಯಾಗಿದೆ; ಬಿಡುಗಡೆಯಾಗಿದ್ದಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೆ; ಬಳಸಿಕೊಳ್ಳದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿವರಗಳನ್ನು ನೀಡುವುದು;

ಇ) ಈ ಕಾರ್ಯಕ್ರಮವನ್ನು ರಾಜ್ಯದ ಯಾವ ಯಾವ ಜಿಲ್ಲೆಗಳಿಗೆ ಅನುಷ್ಠಾನಗೊಳಿಸಲಾಗಿದೆ;

ಈ) ಕೆಲವು ಜಿಲ್ಲೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; ವಿವರ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 2002–2003ನೇ ಸಾಲಿನಲ್ಲಿ ಕೇಂದ್ರ ಸರ್ಕಾರವೂ ಇಂತಿಷ್ಟೆ ಅನುದಾನವೆಂದು ನಿಗದಿಪಡಿಸುವುದಿಲ್ಲ. ಆದರೆ, ಜಲಾನಯನ ಮಾರ್ಗಸೂಚಿ ಅನುಬಂಧ–2ರಲ್ಲಿ ತಿಳಿಸಿರುವಂತೆ ಮಂಜೂರಾದ ಜಲಾನಯನಗಳಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಕೇಂದ್ರ ಸರ್ಕಾರವು ಸಂಬಂಧಪಟ್ಟ ಜಿಲ್ಲೆಗಳಿಗೆ ಅನುದಾನವನ್ನು ಕಂತುಗಳಲ್ಲಿ ಬಿಡುಗಡೆ ಮಾಡುತ್ತದೆ.

ಆ) ರೂ. 5559.4443 ಲಕ್ಷಗಳು ಈವರೆಗೂ ಬಿಡುಗಡೆಯಾಗಿದೆ. ರೂ. 4298.065 ಲಕ್ಷಗಳನ್ನು ಈವರೆವಿಗೂ ಖರ್ಚು ಮಾಡಲಾಗಿದೆ. ಈ ಕಾರ್ಯಕ್ರಮವು ಬೇಡಿಕೆ ಆಧಾರಿತವಾಗಿದ್ದು ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ತ್ರೈಮಾಸಿಕ ಸಭೆಗಳಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಸಭೆಗಳಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಈ ಸಂಬಂಧ ಸೂಚನೆಗಳನ್ನು ನೀಡಲಾಗುತ್ತಿದೆ. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು, ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜಿಲ್ಲೆಯ ಜಿಲ್ಲಾ ಜಲಾನಯನ ಅಧಿಕಾರಿಗಳ ಮಾಸಿಕ ಸಭೆಯಲ್ಲಿ ಸಹ ಸೂಚನೆಗಳನ್ನು ನೀಡುತ್ತಾರೆ.

ಇ) 1. ಬಿಜಾಪುರ
2. ಬಾಗಲಕೋಟೆ
3. ಬಳ್ಳಾರಿ
4. ದಾವಣಗೆರೆ
5. ರಾಯಚೂರು ಮತ್ತು
6. ಕೊಪ್ಪಳ

ಈ) ಬಂದಿದೆ

ಉ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲಾ ಪಂಚಾಯತ್‌ಗಳಲ್ಲಿ ಜಲಾನಯನ ಕಾರ್ಯಕ್ರಮವನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿತ್ತು. ಈ ಬಗ್ಗೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಿಂದ ದೂರು ಬಂದ ಹಿನ್ನಲೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿ ಸಮಿತಿಗೆ ವಿಷಯವನ್ನು ಒಪ್ಪಿಸಲಾಯಿತು. ಜಲಾನಯನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ಸರ್ಕಾರೇತರ ಸಂಸ್ಥೆಗಳನ್ನು ಕಪ್ಪು ಪಟ್ಟಿಯಲ್ಲಿ ಇಟ್ಟು ಸೂಕ್ತ ಕ್ರಮ ಜರುಗಿಸಲು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ವಿಧಾನ ಪರಿಷತ್ತಿನ ಅರ್ಜಿ ಸಮಿತಿಯ ಶಿಫಾರಸು ಮಾಡಿದಂತೆ, ಜಲಾನಯನ ಮಾರ್ಗಸೂಚಿ ಪ್ಯಾರಾ 25 ರಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಸೂಚನೆ ನೀಡಲಾಗಿದೆ. ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೆ, ಈ ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಶೇಕಡ 100 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. 2002–03 ರಲ್ಲಿ 55 ಕೋಟಿ 59 ಲಕ್ಷ ಹಣ ಇದುವರೆಗೆ ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದೀರಿ. ಖರ್ಚಾಗಿರುವುದು 43 ಕೋಟಿ ರೂ. ಅಂದರೆ ಇನ್ನು ಸುಮಾರು 12–13 ಕೋಟಿ ರೂಪಾಯಿ ಇನ್ನೂ ಖರ್ಚಾಗಿಲ್ಲ. ಈಗ ಖರ್ಚಾಗಿರುವುದರಲ್ಲೂ ಯಾವ ಒಂದು ಅಳತೆಗೋಲನ್ನು ಅನುಸರಿಸುತ್ತಿದ್ದೀರಿ? ಇದನ್ನು ಸ್ವಯಂಸೇವಾ ಸಂಸ್ಥೆಗಳ ಮೂಲಕ ಜಾರಿಗೆ ತರುತ್ತಿದ್ದೀರಿ, ಇದು ಈಗಾಗಲೇ 6 ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬಂದಿದೆ, ದೂರುಗಳು ಬಂದಿವೆ ಎಂದು ಹೇಳುತ್ತಿದ್ದೀರಿ. ನಮ್ಮ ವಿಧಾನಪರಿಷತ್ತಿನ ವಿಷಯ ಸಮಿತಿಯವರು ಅವ್ಯವಹಾರವಾಗಿವೆ, ವಿಚಾರಣೆ ನಡೆಸಿದ್ದೇವೆ ಎಂದು ಹೇಳಿದ್ದಾರೆ. ಕೆಲವು ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡಿದ್ದಾರೆ ಎಂದು ಹೇಳಿದ್ದೀರಿ. ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಯಾವ ಸಂಸ್ಥೆಗಳನ್ನು ರದ್ದು ಮಾಡುವುದು, ಕಪ್ಪು ಪಟ್ಟಿಗೆ ಸೇರಿಸುವುದು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆನ್ನುವುದನ್ನು ಹೇಳಬೇಕು. ಹಾಗೂ ಇನ್ನು 12 ಕೋಟಿ ರೂಪಾಯಿ ಬಿಡುಗಡೆ ಮಾಡಿರುವುದಕ್ಕೆ ಕಾರಣವೇನೆಂಬುದನ್ನು ಹೇಳಬೇಕು. ಹೊಸ ಜಿಲ್ಲೆಗಳನ್ನು ಯಾವ್ಯಾವ ಕಾರ್ಯಕ್ರಮಕ್ಕೆ ಸೇರಿಸುವ ಪ್ರಸ್ತಾವನೆ ಬಂದಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ.ಪಿ. ಫೋರ್ಪಡೆ: ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಈ ಕಾರ್ಯಕ್ರಮ ಯಾವ ರೀತಿಯಾಗಿ ನಡೆಯುತ್ತಿದೆ ಎನ್ನುವ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ, ನಂತರ ಆಪಾದನೆಗಳ ಬಗ್ಗೆ ಹೇಳುತ್ತೇನೆ. ಈ ಕಾರ್ಯಕ್ರಮಕ್ಕೆ ತಮಗೆ ಗೊತ್ತಿರುವಂತೆ ಕೇಂದ್ರ ಸರ್ಕಾರದಿಂದ ಸಹಾಯಧನ ಬರುತ್ತದೆ, 55 ಕೋಟಿ ರೂ. ಅದರಲ್ಲಿ 41 ಕೋಟಿ ರೂ. ಎಂದು ತಾವೇ ಹೇಳಿದ್ದೀರಿ. ಬಾಕಿ ಹಣ ತೆಗೆದು ಇಟ್ಟಿದ್ದರಲ್ಲ, ಯಾವ ರೀತಿ ನಾವು ಖರ್ಚು ಮಾಡುತ್ತೇವೆ, ಆ ರೀತಿ ಇಟ್ಟಿದ್ದೇವೆ, It is a demand based ಕಾರ್ಯಕ್ರಮ ಒಂದೊಂದು ವಾಟರ್ ಶೆಡ್‌ಗೆ 30 ಲಕ್ಷ ರೂಪಾಯಿ ಕೊಡುತ್ತಾರೆ. ಒಂದು ಹೆಕ್ಟೇರ್‌ಗೆ 6000 ರೂಪಾಯಿ ಕೊಡುತ್ತಾರೆ. ಇದನ್ನು ಸರ್ಕಾರೇತರ ಸಂಸ್ಥೆಗಳ ಮುಖಾಂತರ ಮಾಡುವುದಕ್ಕೆ ಅವಕಾಶವಿದೆ, ಆ ರೀತಿಯಾಗಿ ಬಹಳಷ್ಟು ಕೆಲಸಗಳು ನಡೆದಿವೆ. ಬಿಜಾಪುರ, ಬಾಗಲಕೋಟೆ ಈ ಭಾಗದಲ್ಲಿ ಎನ್‌ಜಿಓಸ್ ಮಾಡಿರುವ ಕೆಲಸವೇನಿದೆ ಆ ಬಗ್ಗೆ ಆಪಾದನೆಗಳು ಬಂದಿವೆ, ಕೌನ್ಸಿಲ್‌ನಲ್ಲೂ ಕೂಡ ಈ ಬಗ್ಗೆ ದೂರುಗಳು ಬಂದ ನಂತರ ನಾವು ಸಿಇಒಗೆ ಬ್ಲಾಕ್ ಲಿಸ್ಟ್ ಮಾಡಿ ಎಂದು ಹೇಳಿದ್ದೇವೆ, ಇದಲ್ಲದೆ ಷೋ ಕಾಸ್ ನೋಟೀಸ್ ಕೊಡಲು ಹೇಳಿದ್ದೇವೆ. ಈ ಷೋಕಾಸ್ ನೋಟಿಸ್ ಅನ್ನು ಬಿಜಾಪುರ ಎನ್‌ಜಿಓಸ್‌ಗೆ ಕೊಟ್ಟಿದ್ದಾರೆ, ಬಾಗಲಕೋಟೆ

ಎನ್‌ಜಿಓಸ್‌ಗೂ ಕೂಡ ಕೊಟ್ಟಿದ್ದಾರೆ. ಬಿಜಾಪುರ ಎನ್‌ಜಿಓಸ್‌ರವರು ಉತ್ತರವನ್ನು ಕಳುಹಿಸಿದ್ದಾರೆ, ಬಾಗಲಕೋಟೆ ಎನ್‌ಜಿಓಸ್‌ನವರು ಉತ್ತರವನ್ನು ಇನ್ನು ಕಳುಹಿಸುವುದಿದೆ, ಅಧಿಕಾರಿಗಳ ಮೇಲೂ ಕೂಡ ದೂರುಗಳಿರುವುದರಿಂದ ಷೋ ಕಾಸ್ ನೋಟೀಸ್ ಅನ್ನು ಅವರಿಗೂ ಕೊಟ್ಟಿದ್ದೇವೆ, ಇದನ್ನು ಡಿಪಿಎಆರ್ ಕಳುಹಿಸಿದ್ದೇವೆ ಅವರು ಸಮರ್ಪಕವಾಗಿ ನೋಡುತ್ತಾರೆಂದು ನಾವು ಸಿಇಓ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಇದನ್ನು ಮಾಡಬೇಕಾಗುತ್ತದೆ. ಈ ಬಗ್ಗೆ ಸ್ವಲ್ಪ ತಡವಾಗಿದ್ದು ನಿಜ. ನಮಗೆ ಈ ಪ್ರಶ್ನೆ ಬಂದಾಗ ಅಧಿಕಾರಿಗಳಿಗೆ ಹೇಳದೆ ತಕ್ಷಣ ಇದನ್ನು ನೋಡಿಸಬೇಕು ಇದಕ್ಕೆ ಎಷ್ಟು ದಿವಸ ನಿಮಗೆ ಬೇಕಾಗುತ್ತದೆಂದು ಹೇಳಿದೆ, ಅದಕ್ಕೆ ಅವರು ಹೇಳಿದ್ದು ಮೂರು ತಿಂಗಳಲ್ಲಿ ಏನು ರಿಪ್ಲೈಗಳು ಬಂದಿವೆ ಅದರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದರು.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಕೆಲಸಗಳಿವೆ. ಒಂದು, ದನಕರುಗಳಿಗೆ ಕುಡಿಯುವ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡತಕ್ಕಂಥಾದ್ದು. ಒಟ್ಟು 70 ಎಲ್.ಪಿ.ಡಿ. ನೀರನ್ನು ಒದಗಿಸತಕ್ಕಂಥ ಒಂದು ಕಾರ್ಯಕ್ರಮವದು. ಇದಕ್ಕೆ ನೂರಕ್ಕೆ ನೂರರಷ್ಟು ಅನುದಾನ ಸೆಂಟ್ರಲ್ ಗವರ್ನ್‌ಮೆಂಟಿನಿಂದ ಬರುತ್ತದೆ. ತಮಗೆ ಗೊತ್ತಿರುವ ಹಾಗೆ ಎಲ್ಲಾ ವಾಲೆಂಟರಿ ಆರ್ಗನೈಸೇಷನ್‌ಗಳು ನೂರಕ್ಕೆ ನೂರರಷ್ಟು ಒಳ್ಳೆಯ ಆರ್ಗನೈಸೇಷನ್‌ಗಳಲ್ಲ. ಇವುಗಳಲ್ಲಿ ಬಹಳ ದಂಧೆ ನಡಯುತ್ತಾ ಇರತಕ್ಕಂಥಾದ್ದು ತಮಗೆಲ್ಲಾ ಗೊತ್ತಿದೆ. ಬೋಗಸ್ ಆರ್ಗನೈಸೇಷನ್ಸ್ ಕೂಡಾ ಇದೆ. ಈ ಯೋಜನೆಗಳನ್ನು ಅವರಿಗೆ ವಹಿಸಲು ಇರುವ ಅಳತೆಗೋಲು ಏನು, ಮಾನದಂಡವೇನು ಮತ್ತು ಇದು ಕೇವಲ ಆರು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಈ ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬಂದ ಮೇಲೆ, ಇಲ್ಲಿ ಹಣ ಖರ್ಚಾದ ಮೇಲೆ, ಬೇರೆ ಜಿಲ್ಲೆಗಳಿಗೆ ಪ್ರಸ್ತಾಪ ಕಳುಹಿಸಿಕೊಡಬಹುದು. ಆ ರೀತಿ ಬೇರೆ ಎಷ್ಟು ಜಿಲ್ಲೆಗಳಲ್ಲಿ ತೆಗೆದುಕೊಂಡಿದ್ದೀರಿ? ದೂರು ಬಂದಿರುವ ಅಧಿಕಾರಿಗಳ ಮೇಲೆ ಎಷ್ಟು ದಿನದೊಳಗೆ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಕೇಳಲು ನಾನು ಇಚ್ಛೆಪಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದೆ, ನಮಗೆ ಬಂದಿರುವ ರಿಪ್ಲೈಸ್‌ಗಳ ಮೇಲೆ ಮೂರು ತಿಂಗಳೊಳಗಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಎನ್.ಜಿ.ಒ.ಗಳಲ್ಲಿ ಒಳ್ಳೆಯದು, ಕೆಟ್ಟದ್ದು ಎರಡೂ ಇದೆ. ಬಿಜಾಪುರ ಜಿಲ್ಲೆಯಲ್ಲಿ 'ಕವಾಡ' ಯೋಜನೆಯಿದೆ. ತಾವು ಅಲ್ಲಿಗೆ ಹೋಗಿ ನೋಡಬಹುದು. ಉತ್ತಮವಾದಂಥ ಕೆಲಸ ಅಲ್ಲಿ ನಡೆದಿದೆ. ಪಾರದರ್ಶಕವಾದ ಕೆಲಸ ಇಂತಹದ್ದೆ ನಡೆದಿದೆ. Activities of soil conservation, water conservation, horticulture, afforestation, pasture ಇವುಗಳನ್ನೆಲ್ಲಾ ಮಾಡುತ್ತಿದ್ದಾರೆ. 'ಪವಾಡ' ದಂಥ ಎನ್ ಜಿ ಒ ಗಳೂ ಕೂಡ ಇವೆ. ಇವತ್ತು ಕೇಂದ್ರ ಸರ್ಕಾರದ ಚಿಂತನೆ ಏನಿದೆ ಎಂದರೆ, ಇದು ಪಾರದರ್ಶಕವಾಗಿ ನಡೆಯಬೇಕಾದರೆ ಗ್ರಾಮ ಪಂಚಾಯಿತಿಯ ಮುಂದಿಟ್ಟೇ ಈ ಕೆಲಸಗಳಾಗಬೇಕು. ನೇರವಾಗಿ ಎನ್.ಜಿ.ಒ.ಗಳಿಗೆ ಕೊಡುವುದು ಅಷ್ಟು ಸಮರ್ಪಕವಾಗಿಲ್ಲ. ಏಕೆಂದರೆ, ಮಾನಿಟರ್ ಮಾಡುವುದು ಬಹಳ ಕಷ್ಟವಾಗುತ್ತದೆ. ಇದು ಟೆಕ್ನಿಕಲ್ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗಳ ವ್ಯಾಪ್ತಿಯಲ್ಲಿ ಬಂದರೂ ಕೂಡ, ಇದರಲ್ಲಿ ಅವರು ಮಾಡುವುದು ಅಷ್ಟೊಂದು ಏನೂ ಇರುವುದಿಲ್ಲ. ನೇರವಾಗಿ ಎನ್.ಜಿ.ಒ.ಗಳಿಗೆ ಕೊಟ್ಟು, ಅವರು ಏನು ಮಾಡಿದ್ದಾರೆ, ಏನು ಮಾಡಿಲ್ಲ ಎಂದು ನೋಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಇವತ್ತಿನ ಚಿಂತನೆಯಲ್ಲಿ ಗ್ರಾಮಮಟ್ಟದಲ್ಲಿ ಆಗುವ ಕೆಲಸಗಳನ್ನು ವಿಕೇಂದ್ರೀಕರಣ ಮಾಡಬೇಕು. ನಮ್ಮ ಆಕ್ಟಿವಿಟಿ ಮ್ಯಾಪಿಂಗ್‌ನಲ್ಲಿ

ನಾವೂ ಕೂಡ ಅದೇ ಅಭಿಪ್ರಾಯಕ್ಕೆ ಬಂದಿದ್ದೇವೆ. ಅಲ್ಲಿ ಆಗುವಂಥ ಕೆಲಸಗಳು ಅವರಿಗೆ ಗೊತ್ತಿರಬೇಕು. ಅಂದರೆ, ಇದರಲ್ಲಿ ಎನ್.ಜಿ.ಓ.ಗಳು ಇರಬಾರದು ಎಂದು ಅಲ್ಲ. ಗ್ರಾಮಪಂಚಾಯಿತಿಗಳೂ ಜೊತೆಯಲ್ಲಿದ್ದರೆ, ಗ್ರಾಮಸಭೆಯಲ್ಲಿ ಎಲ್ಲರಿಗೂ ವಿಷಯ ಗೊತ್ತಾಗುತ್ತದೆ. ಇದನ್ನು ಪಾರದರ್ಶಕವಾಗಿ ಮಾಡುವುದೇ ಉತ್ತಮ. ಇದರಲ್ಲಿ ಶೇಕಡಾ 8–10–15 ರಷ್ಟು ದೋಷವಿದೆ ಎಂದ ತಕ್ಷಣ ಎಲ್ಲವೂ ದೋಷಪೂರಿತವಾಗಿದೆ ಎಂದು ನಾವು ಹೇಳಲಾಗುವುದಿಲ್ಲ. ಹರಿಯಾಲಿ ಕಾರ್ಯಕ್ರಮದ ಬಗ್ಗೆ ದಯವಿಟ್ಟು ಎಲ್ಲರೂ ಗಮನಿಸಬೇಕು. ಈ ಕಾರ್ಯಕ್ರಮದಲ್ಲಿ ಈಗ ಇದನ್ನೆಲ್ಲಾ ಸೇರಿಸಿಬಿಟ್ಟಿದ್ದಾರೆ. ಡಿ.ಪಿ.ಎ.ಪಿ. D.D.P. ವೆಸ್ಟರ್ನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ಗಳನ್ನು ಪ್ರತ್ಯೇಕವಾಗಿ ಉಳಿಸಿಲ್ಲ. It is no longer Desert Development. It will be called Hariyali ಈ ವರ್ಷದಿಂದ, ಅಂದರೆ 2003–04ರಿಂದ ಎಲ್ಲಾ ಕಾರ್ಯಕ್ರಮಗಳು ಹರಿಯಾಲಿಯಲ್ಲಿ ಬರುತ್ತವೆ. ಇದಕ್ಕೆ ಒಂದು ಕಂಡೀಷನ್ನನ್ನೇ ಹಾಕಿದ್ದಾರೆ. Henceforth, the water shed activities will be carried out through the Grama Panchayat under the Hariyali Scheme of the Government of India. ಇದು ಒಳ್ಳೆಯ ಕ್ರಮ ಎಂದು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ವಾಲುಯೆಂಟರಿ ಅರ್ಗನೈಸೇಷನ್‌ಗಳವರು ಏನು ತಿಳಿದುಕೊಂಡಿದ್ದಾರೆ ಎಂದರೆ, ಈ ಯೋಜನೆಗೆ ನೂರಕ್ಕೆ ನೂರರಷ್ಟು ಹಣ ಕೇಂದ್ರ ಸರ್ಕಾರದಿಂದ ಬರುತ್ತಿದೆ; ಇದರ ಮೇಲೆ ಸಿ.ಇ.ಒ. ಕಂಟ್ರೋಲ್ ಇಲ್ಲ, ಶಾಸಕರ ಕಂಟ್ರೋಲ್ ಇಲ್ಲ, ಇದರ ಬಗ್ಗೆ ಶಾಸಕರ ಮತ್ತು ಸರ್ಕಾರದ ಜವಾಬ್ದಾರಿ ಏನೂ ಇಲ್ಲ ಎಂದು ತಿಳಿದುಕೊಂಡಿರುವ ಅವರು ಹಣವನ್ನು ಏನು ಮಾಡುತ್ತಿದ್ದಾರೆ, ಎಷ್ಟು ಖರ್ಚು ಮಾಡುತ್ತಿದ್ದಾರೆ ಎನ್ನುವುದ್ಯಾವುದೂ ಗೊತ್ತಾಗುತ್ತಿಲ್ಲ. ಅದನ್ನು ಶಾಸಕರ ಗಮನಕ್ಕೂ ತರುತ್ತಿಲ್ಲ. ಆದ್ದರಿಂದ, ಬೇರೆ ಏನಾದರೂ ಮೆಥಡ್ ಉಪಯೋಗಿಸಿ, ಪಾರದರ್ಶಕವಾಗಿ ಮಾಡಿ, ಜಿಲ್ಲಾ ಪಂಚಾಯಿತಿ, ಶಾಸಕರು ಎಲ್ಲರನ್ನೂ ಸೇರಿಸಿ ಜವಾಬ್ದಾರಿ ಕೊಡತಕ್ಕಂಥಾದ್ದು ಸೂಕ್ತ. ಏಕೆಂದರೆ, ಈಗ ಅವರು ನಮಗ್ಯಾರಿಗೂ ಜವಾಬ್ದಾರಿಯೇ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ನಾನು ಇನ್ನೂ ಎರಡು ವಿಷಯಗಳನ್ನು ತಮ್ಮನ್ನು ಕೇಳಿದೆ. ಬೇರೆ ಯಾವುದಾದರೂ ಜಿಲ್ಲೆಗಳಿಗೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೀರಾ? ಇನ್ನೂ ಎಷ್ಟು ಹೆಚ್ಚು ಹಣವನ್ನು ತೆಗೆದುಕೊಳ್ಳುತ್ತಿದ್ದೀರಿ? ಎಷ್ಟ ದಿನಗಳೊಳಗಾಗಿ ದೂರು ಬಂದಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ಎಂದು ಕೇಳಿದೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಬೇರೆ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಸಿ.ಇ.ಒ.ಗಳಿಂದ ಸ್ಟೇಟಸ್ ರಿಪೋರ್ಟ್ ಕೇಳಿದ್ದೇನೆ. ಕೆಲವು ಜಿಲ್ಲೆಗಳ ಸ್ಟೇಟಸ್ ರಿಪೋರ್ಟ್ಸ್ ಈಗಾಗಲೇ ಬಂದಿದೆ. ಇಂಥ ಅಕ್ರಮಗಳು ನಡೆದಿಲ್ಲ ಎಂದು ಅವುಗಳಲ್ಲಿ ವರದಿ ಮಾಡಿದ್ದಾರೆ. ಕೆಲವು ಜಿಲ್ಲೆಗಳಿಂದ ಇನ್ನೂ ಸ್ಟೇಟಸ್ ರಿಪೋರ್ಟ್ ಬರಬೇಕಾಗಿದೆ. ಬಿಜಾಪುರ, ಬಾಗಲಕೋಟೆಗಳಲ್ಲಿ ಸ್ವಲ್ಪಮಟ್ಟಿಗೆ ಅಕ್ರಮಗಳು ನಡೆದಿವೆ. ಅದನ್ನು ವಿಚಾರಣೆ ಮಾಡುತ್ತಿದ್ದೇವೆ. ಎಲ್ಲಾ ಕಡೆಯೂ ಅದೇ ರೀತಿ ನಡೆದಿದೆ ಎಂದು ನಾವು ಹೇಳಲಾಗುವುದಿಲ್ಲ. ಬರಗಾಲದ ಮೇಲೆ ನಡೆದ ಚರ್ಚೆಯಲ್ಲಿ ನಾನು ಸ್ವಲ್ಪಮಟ್ಟಿಗೆ ಭಾಗವಹಿಸಿ ಹೇಳಿದ ಹಾಗೆ ನನ್ನ ದೃಷ್ಟಿಯಲ್ಲಿ ಎಂ.ಎಲ್.ಎ.ಗಳು, ಎಂ.ಪಿ.ಗಳು, ಗ್ರಾಮ ಪಂಚಾಯಿತಿಗಳು, ಡೆಪ್ಯುಟಿ ಕಮೀಷನರುಗಳು ಸಿ.ಇ.ಒ.ಗಳು ಇವರೆಲ್ಲರೂ ಗ್ರಾಮ ಪಂಚಾಯಿತಿಗಳು, ಡೆಪ್ಯುಟಿ ಕಮೀಷನರುಗಳು, ಯಾವ ಯಾವ ಕಾರ್ಯಕ್ರಮದಡಿಯಲ್ಲಿ ಎಷ್ಟೆಷ್ಟು

ಹಣ ಬಂದಿದೆ ಎಂದು ತಿಳಿದುಕೊಂಡು ಒಂದು ಸಮಗ್ರವಾದ ಯೋಜನೆಯನ್ನು ಮಾಡಬೇಕು. ಇದನ್ನು ಕಂಟಿಂಜೆನ್ಸಿ ಯೋಜನೆ ಎಂದು ಕರೆಯಬಹುದು. ಈಗ ನೋಡಿ, ಮಳೆ ಬಂದಿಲ್ಲ, ಕೇಂದ್ರದಿಂದ ಕಾಳು ಬಂದಿಲ್ಲ, ಅದು ಬರುತ್ತದೆಯೋ, ಇಲ್ಲವೋ ನಮಗೆ ಗೊತ್ತಿಲ್ಲ. ಇಂಥ ಪ್ರಸಂಗದಲ್ಲಿ ನಾವು ಬರೀ ಗ್ರಾಮ ಪಂಚಾಯಿತಿಯ ಮೇಲೆ ಜವಾಬ್ದಾರಿ ಹಾಕಿ, ನೀವು ಖರ್ಚು ಮಾಡಿ ಎಂದು ಹೇಳಿದರೆ ಸಾಲದು. ಹರಿಯಾಲಿದಂಥ ಕಾರ್ಯಕ್ರಮಕ್ಕೆ ಅದನ್ನು ಕೂಡ ಸೇರಿಸಿದರೆ ಮತ್ತು ಎಂ.ಎಸ್.ಎ.ಗಳ ಅನುಭವವೂ ಜನರಿಗೆ ಸಿಕ್ಕಿದರೆ ಅದರಲ್ಲಿ ತಪ್ಪೇನೂ ಇಲ್ಲ ಎನ್ನುವುದು ನನ್ನ ಅಭಿಪ್ರಾಯ. ಎಂ.ಎಲ್.ಎ. ಕಾರ್ಯಕ್ರಮಗಳು ಬೇರೆ, ಪಂಚಾಯಿತಿ ಕಾರ್ಯಕ್ರಮಗಳು ಬೇರೆ, ಹರಿಯಾಲಿ ಕಾರ್ಯಕ್ರಮ ಬೇರೆ ಎಂದು ಆಗಬಾರದು. For watershed development, Watershed Development Officers are looking after it. Though Technically it comes under Zilla Panchayat; Watershed Development Department is a line department.

ಶ್ರೀ ಎಸ್.ಎಸ್ ಪಾಟೀಲ್: ಬೇರೆಬೇರೆ ಕಾರ್ಯಕ್ರಮಗಳಾಗಬಾರದು ಎಂದು ತಾವು ಹೇಳಿದ್ದಿರಲ್ಲಾ, ಆದರೆ ಬೇರೆಬೇರೆ ಕಾರ್ಯಕ್ರಮಗಳಾಗಿ ಮಾರ್ಪಾಟು ಮಾಡಿಬಿಟ್ಟಿದ್ದೀರಿ. ಜಿಲ್ಲಾ ಪಂಚಾಯಿತಿಗೆ ಏನು ಕಳುಹಿಸುತ್ತೀರಿ, ಅದನ್ನು ಅವರೇ ಮಾಡುತ್ತಾರೆ. ಶಾಸಕರಿಗೂ ಅದಕ್ಕೂ ಏನೂ ಸಂಬಂಧವಿಲ್ಲ. ಶಾಸಕರಿಗೆ ಏನೂ ಗೊತ್ತಿರುವುದಿಲ್ಲ. ಅಲ್ಲಿ ಶಾಸಕರದು ಏನು ನಡೆಯುವುದಿಲ್ಲ. ಎಲ್ಲರೂ ಸೇರಿ ಮಾಡುವಂಥ ವ್ಯವಸ್ಥೆ ಇಲ್ಲ. ಶಾಸಕರಿಗೆ ಏನೂ ಗೊತ್ತಿರದಿದ್ದರೂ ಬಯ್ಯಿಸಿಕೊಳ್ಳುವವರು ಶಾಸಕರೇ. ಆದ್ದರಿಂದ ತಮಗೆ ಹೇಳುತ್ತಿದ್ದೇವೆ, ಎಲ್ಲರೂ ಸೇರಿ ಮಾಡಬೇಕು ಎಂದು ತಾವು ಹೇಳಿದಿರಿ ಅದರಂತೆ ನೀವು ಆದೇಶ ಹೊರಡಿಸಿ. ಕ್ರಿಯಾ ಯೋಜನೆಯನ್ನು ಮಾಡುವಾಗ ಶಾಸಕರನ್ನೂ ಸೇರಿಸಿಕೊಂಡು ಮಾಡಬೇಕು ಎಂದು ಆದೇಶ ಹೊರಡಿಸಿ. ಆಗ ಮಾತ್ರ ಇದು ಸಾಧ್ಯವಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ: ನಾನು ಅದನ್ನೇ ಹೇಳುತ್ತಿದ್ದೇನೆ, ಅದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಆ ರೀತಿ ಹೇಳುವುದೇನೂ ಬೇಡ, ಆದೇಶ ಹೊರಡಿಸಿ. ನಮ್ಮ ಗದಗಿನಲ್ಲಿ ಆರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬರಗಾಲದ ಕೆಲಸ ಮಾಡಿ ಎಂದು ನೀವು ಹೇಳಿ ಬಂದಿರಿ. ಆದರೆ ಜಿಲ್ಲಾ ಪಂಚಾಯತಿಯವರು ಅದನ್ನು ಒಪ್ಪುತ್ತಿಲ್ಲ. ನಮ್ಮ ಗದಗಿನಲ್ಲಿ ಇನ್ನೂ ಆಗಿಲ್ಲ. ಸರ್ಕಾರ ಹೇಳಿದರೂ ಕೂಡ ಜಿಲ್ಲಾ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯವರು, ಅದು ನಮ್ಮ ಯೋಜನೆ, ಇದನ್ನು ನಾವು ಒಪ್ಪುವುದಿಲ್ಲ, ನಾವು ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಾಗಿ ಬರಗಾಲಕ್ಕೆ ಸಂಬಂಧಪಟ್ಟಂತೆ ಇನ್ನೂ ಕ್ರಿಯಾ ಯೋಜನೆಯನ್ನು ಅವರು ಮಾಡಿಲ್ಲ. ಹೀಗಾಗಿ ಅಲ್ಲಿ ಶಾಸಕರನ್ನು ದೂರ ಇಟ್ಟು ಬಿಟ್ಟಿದ್ದೀರಿ. ಬಯ್ಯಿಸಿಕೊಳ್ಳುವುದಕ್ಕೆ ಮಾತ್ರ ಶಾಸಕರು ಬೇಕೇ?

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಇದು ಸರಿಯಾದಂಥ ಅಭಿಪ್ರಾಯ. ನಮ್ಮ ಬಡದೇಶದಲ್ಲಿ ಇದು ನನ್ನ ಯೋಜನೆ, ಇದು ನಿನ್ನ ಯೋಜನೆ ಎಂದು ಹಂಚಲು ಹೋದರೆ, ಯಾರಿಗೂ ಏನೂ ಸಿಗಲಿಕ್ಕಿಲ್ಲ. ಎಂ.ಎಲ್.ಎ.ಗಳನ್ನು ಜನರು ಆರಿಸಿದ್ದಾರೆ. ಅವರ ಕ್ಷೇತ್ರದಲ್ಲಿ ಆಗುವುದನ್ನು ನೋಡುವ ಅಧಿಕಾರ ಅವರಿಗಿದೆ. ಹೊಸ ವಿಚಾರ ಏನೆಂದರೆ, ಗ್ರಾಮಪಂಚಾಯಿತಿಯ ಮುಂದೆ ಇಟ್ಟು ಮಾಡಬೇಕು ಎನ್ನುವುದು. ಗ್ರಾಮಪಂಚಾಯಿತಿಗೆ ಗಿಟ್ಟುವುದಿಲ್ಲ, ಇಷ್ಟೇ ಬಂದದ್ದು.

ಶ್ರೀ ಸಿ. ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಒಂದು ಆದೇಶ ಮಾಡಬೇಕು.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಈ ಯೋಜನೆಗಳು ಅಲ್ಪಸ್ವಲ್ಪ ಹಣದ್ದು ಅಲ್ಲ. ಇವು ಕೋಟ್ಯಾಂತರ ರೂಪಾಯಿಗಳ ಯೋಜನೆಗಳು. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಇದು. ಈ ಕೋಟ್ಯಾಂತರ ರೂಪಾಯಿಗಳನ್ನು ಕೇವಲ ವಾಲೆಂಟರಿ ಆರ್ಗನೈಸೇಷನ್‌ಗಳಿಗೋ ಅಥವಾ ಗ್ರಾಮ ಪಂಚಾಯಿತಿಗೋ ಕೊಟ್ಟು, ಶಾಸಕರನ್ನು ಜಿಲ್ಲಾ ಪಂಚಾಯಿತಿಯಿಂದ ದೂರ ಇಡತಕ್ಕಂಥಾದ್ದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಈ ಬಗ್ಗೆ ನಮ್ಮ ಒಂದು ಸಲಹೆ ಎಂದರೆ, ಕೇಂದ್ರ ಸರ್ಕಾರದಿಂದ ಬಂದಂಥ ಇಂಥ ಪ್ರಾಜೆಕ್ಟ್‌ಗಳನ್ನು ಅನುಷ್ಠಾನಕ್ಕೆ ತರಬೇಕಾದರೆ, ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಇಂಪ್ಲಿಮೆಂಟೇಷನ್ ಕಮಿಟಿಯನ್ನು ಮಾಡಿ, ಪ್ರತಿಯೊಂದೂ ಅವರ ಜವಾಬ್ದಾರಿಯಿಂದ ಆಗಬೇಕು ಎಂದು ತಾವು ಮಾಡಬೇಕು. ಒಂದು ಕಡೆ, ಶಾಸಕರನ್ನು ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುತ್ತೀರಿ, ಇನ್ನೊಂದು ಕಡೆ, ಕೇಂದ್ರ ಸರ್ಕಾರದಿಂದ ಬರುವಂಥ ಕೋಟ್ಯಾಂತರ ರೂಪಾಯಿಗಳ ಯೋಜನೆಗಳು ಶಾಸಕರ ಗಮನಕ್ಕೇ ಬರುವುದು ಬೇಡ ಎಂದರೆ ಇದು ಸರಿಯಾಗಿ ಕಾಣುವುದಿಲ್ಲ. ಅದು ಅವರ ಗಮನಕ್ಕೆ ಬರಬೇಕು ಮತ್ತು ಸಂಪೂರ್ಣವಾದ ಜವಾಬ್ದಾರಿ ಶಾಸಕರದ್ದಾಗಬೇಕು. ಈ ಬಗ್ಗೆ ಒಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟರೆ ಬಹಳ ಅನುಕೂಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿ. ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಅನಿಸಿಕೆ ಬಹಳ ಉತ್ತಮವಾದುದು. ನನ್ನ ಕ್ಷೇತ್ರದ ತ್ಯಾಮಗೊಂಡ್ಲು ಪಂಚಾಯಿತಿಯಲ್ಲಿ ಒಂದು ಆ್ಯಕ್ಷನ್ ಪ್ಲಾನ್ ಮಾಡಿದ್ದಾರೆ. ಆ ಪಂಚಾಯಿತಿಯಲ್ಲಿ ಸದಸ್ಯರು ಹಣವನ್ನು ತಮ್ಮ ಮನ ಬಂದ ಹಾಗೆ ಹಂಚಿಕೊಂಡು, ಯಾವುದೇ ಉತ್ತಮವಾದ ಕೆಲಸವನ್ನು ಮಾಡುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರು ದಯಮಾಡಿ ಶಾಸಕರಾದ ನಮಗೆ ಅಲ್ಲಿ ಅಧಿಕಾರ ಬೇಕಾಗಿಲ್ಲ. ನಮ್ಮನ್ನು ಅಲ್ಲಿ ಕೂರಿಸಿಕೊಂಡು ಆಕ್ಷನ್ ಪ್ಲಾನ್ ಮಾಡುವುದಕ್ಕೆ ಸರ್ಕಾರ ಒಂದು ಸುತ್ತೋಲೆ ಹೊರಡಿಸಿದರೆ ಬಹಳ ಒಳ್ಳೆಯದು.

ಶ್ರೀ ಎ.ಎಸ್. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಚಾರವನ್ನು ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಗುರುಸ್ವಾಮಿಯವರೆ, ಇದು ಆದ ಮೇಲೆ ಕೂಡಲೇ ಗ್ರಾಮೀಣಾಭಿವೃದ್ಧಿ ಡಿಮ್ಯಾಂಡ್ ಮೇಲೆ ಡಿಸ್ಕಶನ್ ನಡೆಯುತ್ತದೆ. ಇನ್ನೊಂದು 15 ನಿಮಿಷದಲ್ಲಿ ಪ್ರಾರಂಭವಾಗುತ್ತದೆ ನಿಮಗೆ ಈಗ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಒಂದು ಪ್ರಶ್ನೆಗೆ ಈಗಾಗಲೇ 20 ನಿಮಿಷ ಕಾಲ ಚರ್ಚೆ ಆಗಿದೆ. ಇದು ತಡೆಹಿಡಿಯಲಾದ ಪ್ರಶ್ನೆ ಆಗಿದೆ. ಇದಕ್ಕೇ ಇಷ್ಟೊತ್ತು ಆದರೆ ನಾನು ಸದನವನ್ನು ಹೇಗೆ ನಡೆಸುವುದು, ತಾವು ಹೇಳಿ. ಪ್ರಶ್ನೋತ್ತರ ವೇಳೆಯಲ್ಲಿ ನೀವು ದೀರ್ಘವಾಗಿ ಭಾಷಣ ಮಾಡುತ್ತಾ ಹೋದರೆ ಹೇಗೆ? ಮುಂದೆ ಗ್ರಾಮೀಣಾಭಿವೃದ್ಧಿ ಡಿಮ್ಯಾಂಡ್ ಮೇಲೆ ಡಿಸ್‌ಕಷನ್ ಆಗುವಾಗ ನೀವು ಮಾತನಾಡಿ, ನಿಮಗೆ ಅರ್ಧ ಗಂಟೆ ಸಮಯಾವಕಾಶ ಕೊಡುತ್ತೇನೆ ಪ್ರತಿಯೊಬ್ಬರೂ ನಾನು ಮಾತನಾಡುತ್ತೇನೆ, ನಾನು ಮಾತನಾಡುತ್ತೇನೆಂದು ಹೇಳುತ್ತಾರೆ. What is this? I can't understand. ಒಂದೊಂದು ಪ್ರಶ್ನೆಗೂ ಇಷ್ಟೊತ್ತು ತೆಗೆದುಕೊಂಡರೆ ಹೇಗೆ?

ಶ್ರೀ ಎ.ಎಸ್. ಗುರುಸ್ವಾಮಿ: ಇಲ್ಲಿ ಪ್ರಶ್ನೆ ಇರುವುದು ಇಷ್ಟೇ ಸರ್. ನಾವು, ನೀವು ಎಲ್ಲಾ ಜನತೆಯಿಂದ ಆರಿಸಿ ಬಂದಿರತಕ್ಕಂಥ ಜನಗಳು ನಾವು. ಎಲ್ಲರ ಸಂಕಷ್ಟವೂ ಒಂದೇ ಸರ್. ಅವರು ಅಲ್ಲಿ ಕುಳಿತಿರಬಹುದು, ನಾವು ಇಲ್ಲಿ ಕುಳಿತಿರಬಹುದು. ಅದನ್ನು ಬಿಟ್ಟರೆ ಭಾವನೆ ಎಲ್ಲಾ

ಒಂದೇ. ನೋವು ಎಲ್ಲಾ ಒಂದೇ. ಏನು ಸರ್, ನಮ್ಮನ್ನು ಅನೇಕ ಸಲ ಕೇಳದೆಯೇ ತಾಲ್ಲೂಕು ಪಂಚಾಯಿತಿಯಲ್ಲಿ ಅವರವರೇ ಆಕ್ಷನ್ ಪ್ಲಾನ್ ಅನ್ನು ಮಾಡಿಕೊಳ್ಳುತ್ತಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ my Taluk Panchayat is ruled by opposition party. ಆ ರೀತಿ ಆದರೆ ನಮ್ಮ ಗತಿ ಏನಾಗಬೇಕು ಸರ್? ಅವರು ಕೇಳುವುದಕ್ಕೆ ರೆಡಿ ಇಲ್ಲ. ನಾಲ್ಕೂವರೆ ಲಕ್ಷ ಜನತೆಯಿಂದ ಚುನಾಯಿತರಾದಂಥ ಶಾಸಕರನ್ನು ಬಿಟ್ಟುಬಿಟ್ಟರು 10 ಸಾವಿರ 20 ಸಾವಿರ ಮತದಿಂದ ಎಲೆಕ್ಟ್ ಆದವರು ಇವನು ಯಾರ್ರೀ ಶಾಸಕ, ಯಾರ್ರೀ ಶಾಸಕ ಎಂದರೆ ನಾನು ಎಲ್ಲಿ ಹೋಗಬೇಕು ಸರ್? ದಯಮಾಡಿ ನಮ್ಮ ಮಂತ್ರಿಗಳು, ಶಾಸಕರಿಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಶ್ರೀ ಗುರುಸ್ವಾಮಿಯವರೇ, ನಾನೇ ಮಂತ್ರಿಗಳಿಗೆ ಹೇಳುತ್ತೇನೆ. ಮಾನ್ಯ ಘೋರ್ಪಡೆಯವರೆ, ಇಲ್ಲಿ ಏನಾಗಿದೆ ಎಂದರೆ ಗ್ರಾಮ ಸಭೆಗಳಲ್ಲಿ ನಾವು ಹೇಳಿದ್ದನ್ನು ಕೇಳುವುದಿಲ್ಲ. ಜಿಲ್ಲಾಮಟ್ಟದಲ್ಲಿ, ಪಂಚಾಯತ್‌ನಲ್ಲಿ ನಾವು, ಶಾಸಕರು ಹೇಳುವುದನ್ನು ಕೇಳುವುದಿಲ್ಲ. ತಾಲ್ಲೂಕು ಸಮಿತಿಯಲ್ಲಿ ಸಹ ಶಾಸಕರು ಹೇಳುವುದನ್ನು ಮಾಡುವುದಿಲ್ಲ. ಇಲ್ಲಿ ಎಲ್ಲಾ ಟಾಸ್ಕ್‌ಫೋರ್ಸ್ ಏನೇನೋ ಮಾಡಿಕೊಂಡು ಶಾಸಕರಿಗೆ ಏನೂ ಇಲ್ಲದ ಹಾಗೆ, ಒಂದು ಗುಂಡು ಸೂಜಿಯನ್ನೂ ಸಹ ಸ್ಯಾಂಕ್ಷನ್ ಮಾಡುವುದಕ್ಕೆ ಇವತ್ತು ಶಾಸಕರಿಗೆ ಶಕ್ತಿ ಇಲ್ಲ. ಏನಿದು? ಇವೆಲ್ಲವನ್ನೂ ಸರಿಪಡಿಸಿ.

ಶ್ರೀ ಕಾಗೋಡು ತಿಮ್ಮಪ್ಪ: ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಈ ರೀತಿ ಹೇಳಬಾರದು. ಬೇರೆ ಯಾರೋ ಹೇಳಿದರೆ ಪರವಾಗಿಲ್ಲ.

ಅಧ್ಯಕ್ಷರು: ಇರುವ ವಿಚಾರವನ್ನು ಹೇಳಿದೆ. ಮಾನ್ಯ ಸದಸ್ಯರುಗಳ ಅಭಿಪ್ರಾಯ ಏನಿದೆ, ಅವರ ಮೈಂಡ್‌ನಲ್ಲಿ ಏನಿದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಒಟ್ಟಾರೆ ಹೇಳುತ್ತಿದ್ದೇನೆ. ಅಷ್ಟೆ.

(ಗೊಂದಲ)

ಅಧ್ಯಕ್ಷರು: ಸ್ವಾಮಿ, ನಾವು ಅನುಭವಿಸಿದ್ದೇವೆ. ನೀವೇನೋ ಮಂತ್ರಿಗಳು.

(ಗೊಂದಲ)

ಅಧ್ಯಕ್ಷರು: ಪ್ಲೀಸ್, ದಯವಿಟ್ಟು ಇಲ್ಲಿ ಕೇಳಿ. ಬೆಲ್ಲದ್‌ರವರೇ, you please take your seat. ಮಾನ್ಯ ಮಂತ್ರಿಗಳು ಹೇಳುವುದು ಕರೆಕ್ಟ್. ತಮ್ಮದೆಲ್ಲ ನಡೆಯುತ್ತದೆ. ನಾನು ಇಲ್ಲಿ ಪ್ರಶ್ನೆ ಕಳುಹಿಸುವ ಹಾಗಿಲ್ಲ, ಕಾಲಿಂಗ್ ಅಟೆನ್‌ಷನ್ ಕಳುಹಿಸುವ ಹಾಗಿಲ್ಲ, ಅಥವಾ ಯಾವುದೋ ಒಂದು ವಿಷಯಕ್ಕೆ ಪತ್ರ ಬರೆದರೆ ಅದಕ್ಕೆ ಸರ್ಕಾರದಿಂದ ಉತ್ತರ ಬರುವುದಿಲ್ಲ. ನನ್ನ ಕಷ್ಟವನ್ನು ನಾನು ಯಾರ ಹತ್ತಿರ ಹೇಳಿಕೊಳ್ಳಬೇಕು ಹೇಳಿ? ನಿಮಗೇನೋ, ನೀವು ಮಂತ್ರಿಗಳು ಎಲ್ಲ ನಡೆಯುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ತಾವು ಅಧ್ಯಕ್ಷರಾಗಿ ಅದು ಇದೆ ನಿಜ. ತಾವು ಅಧ್ಯಕ್ಷರಾಗಿ ಯಾರಿಗೆ ಏನು ಕೆಲಸ ಹೇಳಿದರೂ ಯಾರು ಮಾಡುವುದಿಲ್ಲಾ?

ಅಧ್ಯಕ್ಷರು: ಸ್ವಾಮಿ, ಶಾಸಕರ ಕಳಕಳಿಯನ್ನು ಅರ್ಥಮಾಡಿಕೊಂಡು ಮುಂದುವರೆಸಿ, ಅಷ್ಟೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ನಿಮಗೇ ಇಂಥ ಗತಿ ಬಂದಿರಬೇಕಾದರೆ ಇನ್ನು ನಮ್ಮ ವಿರೋಧ ಪಕ್ಷದ ಶಾಸಕರುಗಳು ಗತಿ ಹೇಗಿರಬೇಡ?

(ಗೊಂದಲ)

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರೆ, ದಯವಿಟ್ಟು ಗ್ರಾಮಸಭೆ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಅನೇಕ ವ್ಯತ್ಯಾಸಗಳು ಇವೆ. ಶಾಸಕರಿಗೂ ಹೆಚ್ಚಾಗಿ ಅಲ್ಲಿ ಪಾತ್ರವಹಿಸುವುದಕ್ಕೆ ಏರ್ಪಾಟು ಮಾಡಿ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾವು ಇಷ್ಟು ವರ್ಷಗಳಿಂದ ಯಾವ ಧಾಟಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇವೆ, ಅದನ್ನು ನಾವು ಸಂಪೂರ್ಣವಾಗಿ ಬದಲಾಯಿಸಬೇಕಾಗುತ್ತದೆ. ಹಾಗೆಯೇ ಗ್ರಾಮಪಂಚಾಯಿತಿ ಮಟ್ಟದಲ್ಲಿ ಬರೀ ಎಂ.ಎಲ್.ಎ.ಗಳು, ಎಂ.ಪಿ.ಗಳು ಅಷ್ಟೇ ಅಲ್ಲ, ಅಧಿಕಾರಸ್ಥರು, ಡೆಪ್ಯುಟಿ ಕಮಿಷನರ್‌ಗಳು, ಸಿ.ಇ.ಒ.ಗಳು ಸಂಬಂಧಪಟ್ಟ ಡಿಪಾರ್ಟ್‌ಮೆಂಟಲ್ ಆಫಿಸರ್ಸ್ ಮತ್ತು ಪಂಚಾಯಿತಿಯವರು ಇರಲಿ, ಅವರು ಎಲ್ಲರೂ ಸೇರಿ ಆ ಪಂಚಾಯಿತಿಯಲ್ಲಿ ಎಷ್ಟು ಕೆಲಸ ಮಾಡಲಿಕ್ಕೆ ಸಾಧ್ಯ, ಬೇರೆ ಬೇರೆ ಸ್ಕೀಂಗಳನ್ನು ಜೋಡಿಸಿ ಲೆಕ್ಕ ಹಾಕಿದರೆ 50 ಲಕ್ಷ ರೂಪಾಯಿಗಳ ಕೆಲಸವನ್ನು ಒಂದು ಪಂಚಾಯಿತಿ ಮಾಡಲಿಕ್ಕೆ ಸಾಧ್ಯ ಎಂದು ನನಗನ್ನಿಸುತ್ತದೆ. ಗ್ರಾಮಪಂಚಾಯಿತಿಯ ಸ್ವಂತ ಹಣ 15 ಲಕ್ಷ ರೂಪಾಯಿಗಳು ಇರಬಹುದು. ಅದಲ್ಲದೆ ಇನ್ನೂ ಎರಡರಷ್ಟು ಹಣವನ್ನು ನಾವು ಜೋಡಿಸಲಿಕ್ಕೆ ಸಾಧ್ಯ ಇರುವಾಗ ಆ ವರ್ಷದಲ್ಲಿ ಒಂದು ಸಲವಾದರೂ ಜನ ಎಲ್ಲಾ ಒಂದು ಕಡೆ ಸೇರಿ ಈ ಗ್ರಾಮದಲ್ಲಿ 50 ಲಕ್ಷ ರೂಪಾಯಿಗಳ ಕೆಲಸವನ್ನು ಯಾವ ರೀತಿ ಮಾಡಿಸಬೇಕು, ಯಾವ ಯಾವುದನ್ನು ಮಾಡಿಸಬೇಕು ಎನ್ನುವುದನ್ನು ನಮ್ಮ ಪ್ರೆಸ್ಟೀಜ್ ಪ್ರಶ್ನೆ ಬಿಟ್ಟು ನಾವು ಹೋಗಿ ಕೊಡಲಿಕ್ಕೆ ಸಾಧ್ಯ ಆಗದೇ ಇದ್ದರೆ ಮತ್ತೆ ಯಾವ ಕಾರ್ಯಕ್ರಮ ನಡೆಸಲಿಕ್ಕೆ ಸಾಧ್ಯ? ಗ್ರಾಮಪಂಚಾಯಿತಿಗಳು ಎಷ್ಟು ವರ್ಷ ಏನು ಹೇಗೆ ಮಾಡುತ್ತಿದ್ದರು, ಆ ಧಾಟಿಯನ್ನು ಸಂಪೂರ್ಣವಾಗಿ ಬಿಡಬೇಕು. ನಾನು ಹೇಳುವುದೇನೆಂದರೆ, ನನಗೆ ಎಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕು ಎಲ್ಲಾ ಎಂ.ಎಲ್.ಎ.ಗಳಿಗೂ ಇದೆ. ನಾವು ಅವರ ಜೊತೆ ಕುಳಿತುಕೊಂಡು, ನೋಡಪ್ಪ, ಈ ವರ್ಷ ನಾವು 50 ಲಕ್ಷ ರೂಪಾಯಿಗಳಲ್ಲಿ ಇಂಥಿಂಥ ಕೆಲಸಗಳನ್ನು ಮಾಡಿಸಬೇಕು, ಅದಕ್ಕೆ ಏಕೆ ಮುಂದೆ ಬಂದು ಮಾಡಬಾರದು? ಎಂ.ಎಲ್.ಎ. ಫಂಡ್ ಇದ್ದು ಅದು...

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ: ಎಂ.ಎಲ್.ಎ. ಗ್ರಾಂಟ್ ಆಗಲೀ, ಎಂ.ಪಿ. ಗ್ರಾಂಟ್ ಆಗಲೀ ನಾವು ಅವರಿಗೆ ಯಾವ ರೀತಿ ಕೊಡಲಿಕ್ಕೆ ಆಗುವುದಿಲ್ಲವೋ, ಅದೇ ರೀತಿ ಅವರಿಗೆ ಬರುವ ಹಣ ಏನಿದೆ ಅದನ್ನು ಯಾವುದಕ್ಕೂ ಕೊಡುವುದಕ್ಕಾಗುವುದಿಲ್ಲ. ಅದು ಅಲ್ಲಿಯೇ ಖರ್ಚಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್: ಅಧಿಕಾರ ಕೊಟ್ಟಿದ್ದರೆ ಇಲ್ಲ ಎನ್ನುವುದಿಲ್ಲ. ಬರಗಾಲದ್ದು ಕೊಟ್ಟರೂ ಕೂಡ ನಾವು ಅವರೆಲ್ಲರನ್ನೂ ಕರೆಸುತ್ತೇವೆ. ನೀವೇ ಟಾಸ್ಕ್‌ಫೋರ್ಸ್ ಮಾಡಿರಿ ಎಂದು ನಮಗೇನೂ ಬರಗಾಲದ್ದು ಕೊಟ್ಟಿದ್ದೀರಲ್ಲಾ ಎಲ್ಲಾ ಪಂಚಾಯಿತಿದಾರರನ್ನು ಎಲ್ಲರನ್ನೂ ಕರೆಸಿ ನಾವು ಮಾಡುತ್ತಿದ್ದೇವೆ. ಆದರೂ ಅವರು ನಮ್ಮನ್ನು ಕರೆದು ಮಾಡುತ್ತಿಲ್ಲ. ಎಲ್ಲಾ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಕರೆಸಿ ನಾವು ಎಲ್ಲಾ ಶಾಸಕರು ಮಾಡುತ್ತಿದ್ದೇವೆ. ಆದರೆ ಅವರು ಇವತ್ತು ಒಬ್ಬ ಶಾಸಕರನ್ನೂ ಕರೆಯುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಇದು ಸಾಕು. ನಮ್ಮ, ಶಾಸಕರ ಕಳಕಳಿಯನ್ನು ಅರ್ಥ ಮಾಡಿಕೊಂಡಿದ್ದಾರೆ. ಅವರು ಯಾವುದಾದರೂ ಮಾರ್ಗೋಪಾಯವನ್ನು ಹುಡುಕುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಅವರು ಅವರ ಕ್ಷೇತ್ರದಲ್ಲಿ ನಡೆಯುವಂಥ ಯಾವುದಾದರೂ ಒಂದು ಮೀಟಿಂಗ್‌ನಲ್ಲಿ ಕುಳಿತುಕೊಂಡು, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮೀಟಿಂಗ್‌ನಲ್ಲಿ ಕುಳಿತುಕೊಂಡಿದ್ದರೆ ನಿಮಗೆ ಈ ಕಷ್ಟ ಸುಖ ಗೊತ್ತಾಗುತ್ತದೆ. ಸ್ವಾಮಿ, ನೀವು ಅಲ್ಲಿ ಹೋಗಿಲ್ಲ. ನಾನು ಪೂರ್ತಿ ಮಾಹಿತಿ ಇಟ್ಟುಕೊಂಡೇ ಹೇಳುತ್ತಿದ್ದೇನೆ. ನೀವು ಇಲ್ಲಿ ಪುಸ್ತಕದ ಬದನೆಕಾಯಿ ಆಗಿ ವಿಧಾನಸಭೆಯಲ್ಲಿ ನಮಗೆ ಪಾಠ ಹೇಳುತ್ತಿದ್ದೀರಿ ಅಷ್ಟೇ ವಿನಃ ನಿಮಗೆ ನಿಮ್ಮದೇ ಆದಂಥ ಅನುಭವ ಇಲ್ಲದೇ ಇರುವುದರಿಂದ ಇವತ್ತು ಈ ಪರಿಸ್ಥಿತಿ ನಮಗೆ ಉದ್ಭವಿಸಿದೆ. ಇದನ್ನು ನೀವು ಅರ್ಥಮಾಡಿಕೊಂಡರೆ ಇದು ನಿಮಗೂ ಸರಿಹೋಗುತ್ತದೆ, ನಮಗೆಲ್ಲರಿಗೂ ಸರಿ ಹೋಗುತ್ತದೆ. ಇದರಲ್ಲಿ ಎರಡನೇ ಮಾತೇ ಇಲ್ಲ.

ಅಧ್ಯಕ್ಷರು: ದಯವಿಟ್ಟು ಶಾಸಕರ ಕಳಕಳಿಯನ್ನು ಅರ್ಥಮಾಡಿಕೊಳ್ಳಿ.

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ಹಳ್ಳಿಗೇ ಹೋಗುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ತಾಲ್ಲೂಕು ಪಂಚಾಯಿತಿ ಮೀಟಿಂಗ್‌ಗೆ ಒಂದಕ್ಕೂ ನಾನು ತಪ್ಪಿಸಲಿಲ್ಲ. ಮತ್ತು ಎಷ್ಟೋ ಕಡೆ ಗ್ರಾಮಪಂಚಾಯಿತಿಗೆ ಹೋದರೆ ಹಲವಾರು ಯೋಜನೆಗಳಿಂದ ಏನು ಅವರಿಗೆ ಬರಲಿಕ್ಕೆ ಸಾಧ್ಯ ಅದನ್ನು ಹೇಳುವುದೇ ನನ್ನ ಕೆಲಸ ಆಗಿದೆ. ಇದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ನಾನು ಒಬ್ಬನೇ ಅದನ್ನು ಮಾಡಲಿಕ್ಕೆ ಬರುವುದಿಲ್ಲ. ನನಗೆ ಮತ್ತು ಹಳ್ಳಿಯ ಜನಕ್ಕೆ ನೇರವಾಗಿ ಸಂಬಂಧ ಇರುವುದರಿಂದ 7 ಸಲ ನನ್ನನ್ನು ಜನ ಆರಿಸಿ ಕಳುಹಿಸಿದ್ದಾರೆ. ಹಾಗಿದ್ದರೆ ನನ್ನನ್ನು ಸೋಲಿಸಲಿಕ್ಕೆ ಏಕೆ ಆಗಲಿಲ್ಲ. ಏಕೆ ಆಗಲಿಲ್ಲ? ಸಂಬಂಧ ಇಲ್ಲದೆಯೇ ಈ ಕಾಲಕ್ಕೆ ಅವರು ಓಟು ಹಾಕುತ್ತಾರೆಯೇ? That is not the point, the point is, ನಾವು ಪ್ರತಿಷ್ಟೆ ಪ್ರಶ್ನೆ ಮಾಡಿಕೊಳ್ಳಬಾರದು. ಎಂ.ಎಲ್.ಎ. ಆಗಲೀ, ಪಂಚಾಯಿತಿ, ಅಧ್ಯಕ್ಷ ಆಗಲಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಆಗಲಿ, ಇದರಲ್ಲಿ ಪ್ರತಿಷ್ಟೆ ಪ್ರಶ್ನೆ ಇಲ್ಲ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡ್ರೇ, ಈಗ ಸಾಕು, ಗ್ರಾಮೀಣಾಭಿವೃದ್ಧಿ ಬಗ್ಗೆ ಡಿಮ್ಯಾಂಡ್ ಮೇಲೆ ಚರ್ಚೆ ಆಗುವಾಗ ಮಾತನಾಡಿ. ಈಗ ಬೇಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ನಿಮ್ಮದು ಹಿಂದಿನಿಂದಲೂ ರಾಜಮನೆತನ. ನಾವು ಹಾಗಲ್ಲ, ರೈತರ ಹಿನ್ನೆಲೆಯೊಳಗೆ ಬಂದಿರುವವರು. ನೀವು ಗೆದ್ದಿರುವುದೇ ನಿಮಗೆ ಯಾರ್ಡ್‌ಸ್ಟಿಕ್ ಆಗಬಾರದು. ದಯವಿಟ್ಟು ನೀವು ಗೆದ್ದಿರುವುದೇ ನಿಮಗೆ ಅಳತೆಗೋಲು ಆಗಬಾರದು. ನೀವು ತೆಗೆದುಕೊಂಡಿರುವಂಥ ಇಲಾಖೆ ರೂರಲ್ ಡೆವಲಪ್‌ಮೆಂಟ್ ಆಗಿರುವುದರಿಂದ ನೀವು ನಿಮ್ಮ ಕ್ಷೇತ್ರದಲ್ಲಿರುವ ಪಂಚಾಯಿತಿಗೆ ಹೋಗಿ, ನಮ್ಮ ಕ್ಷೇತ್ರದ ಪಂಚಾಯಿತಿಗೆ ಬಂದು ನೋಡಿ ಎಂದು ನಾನೇನು ನಿಮ್ಮನ್ನು ಕೇಳಲಿಲ್ಲ. ನಿಮ್ಮ ಅಲ್ಲಿಯ ಅನುಭವವನ್ನು ಪಡೆದುಕೊಂಡು ನಮಗೆಲ್ಲಾ ಪಾಠ ಹೇಳಿದರೆ ಶಿರಸಾವಹಿಸಿ ನೀವು ಹೇಳಿದ ಹಾಗೆ ಕೇಳುತ್ತೇವೆ.

ಶ್ರೀ ಎಂ.ವೈ. ಘೋರ್ಪಡೆ: ಹಳ್ಳಿಗೆ ಹೋದರೆ ಪಂಚಾಯಿತಿಗೆ ಹೋಗದೆ ಇನ್ನು ಎಲ್ಲಿಗೆ ಹೋಗುತ್ತೇನೆ? ಅಲ್ಲಿ ಯಾವ ಹಳ್ಳಿಗೂ ಹೋದರೂ ಕೂಡ ಕೊಟ್ಟರೆ ಪಂಚಾಯಿತಿಯಲ್ಲಿಯೇ ಕೊಡುತ್ತಾರೆ. ಅಲ್ಲಿಯೇ ಕುಳಿತು ಮಾತನಾಡುತ್ತೇವೆ.